ಪಶು ಆಸ್ಪತ್ರೆಗಳು

101(1660); ಶ್ರೀ: ಪ್ರತಾಪಗೌಡ ಪಾಟೀಲ್ (ಮಸ್ಕಿ)

ಅ) ರಾಜ್ಯದಲ್ಲಿರುವ ಪಶು ಆಸ್ಪತ್ರೆಗಳು ಎಷ್ಟು;

ಆ) ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆಗಳು ಮಂಜೂರಾಗಿವೆಯೇ;

ಇ) ರಾಯಚೂರು ಜಿಲ್ಲೆಯಲ್ಲಿ ಜಾನುವಾರುಗಳ ಸಂಖ್ಯೆಗನುಗುಣವಾಗಿ ಮಂಜೂರಾದ ಆಸ್ಪತ್ರೆಗಳೆಷ್ಟು;

ಈ) ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನಾ ಸಚಿವರು)

ಅ) ರಾಜ್ಯದಲ್ಲಿ 4112 ವಿವಿಧ ಹಂತದ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಆ) ಹೌದು.

ರಾಜ್ಯದಲ್ಲಿ 2007ನೇ ಜಾನುವಾರು ಗಣತಿಯಂತೆ 10728417 ಜಾನುವಾರು ಘಟಕಗಳಿದ್ದು, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುವೈದ್ಯ ಸಂಸ್ಥೆ ಕಾರ್ಯನಿರ್ವಹಿಸಬೇಕಾಗಿದ್ದು, ಅದರಂತೆ 3395 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯವಿದ್ದು, ಪ್ರಸ್ತುತ 4112 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಇ) ರಾಯಚೂರು ಜಿಲ್ಲೆಯಲ್ಲಿ 2007ನೇ ಜಾನುವಾರು ಗಣತಿಯಂತೆ 716218 ಜಾನುವಾರು ಘಟಕಗಳಿದ್ದು, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ 144 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯವಿದ್ದು, ಪ್ರಸ್ತುತ 105 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಈ) ಹೌದು.

ಶ್ರೀ ಪ್ರತಾಪಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಜಾನುವಾರುಗಳ ಸಂಖ್ಯೆಗನುಗುಣವಾಗಿ ಪಶು ಆಸ್ಪತ್ರೆಗಳಿಲ್ಲ. ವಿಶೇಷವಾಗಿ ನಮ್ಮ ಹೈದರಾಬಾದ್–ಕರ್ನಾಟಕ ಪ್ರದೇಶದ ಭಾಗಗಳಲ್ಲಿ 20–25 ಸಾವಿರ ಜಾನುವಾರುಗಳಿಗೆ ಒಂದರಂತೆ ಪಶು ಆಸ್ಪತ್ರೆಗಳು ಇರುವುದು. ರಾಯಚೂರು ಜಿಲ್ಲೆಯಲ್ಲಿ 2007 ರ ಜನಗಣತಿಯ ಪ್ರಕಾರ 144 ಪಶು ಆಸ್ಪತ್ರೆಗಳು ಇರಬೇಕಿತ್ತು, ಅದರಲ್ಲಿ 105 ಪಶು ಆಸ್ಪತ್ರೆಗಳಿವೆ ಎಂದು ಹೇಳಿದ್ದಾರೆ. ಹೀಗಾಗಿ ಅಲ್ಲಿನ ಜಾನುವಾರುಗಳು ರೋಗರುಜಿನಗಳಿಗೆ ಬಲಿಯಾದರೆ ಚಿಕಿತ್ಸೆಗೆ ಕಷ್ಟವಾಗಿದೆ. ಸುಮಾರು ವರ್ಷಗಳಿಂದ ಅಲ್ಲಿ ಸರ್ಕಾರಿ ಪಶು ಆಸ್ಪತ್ರೆಗಳನ್ನು ನೀಡಬೇಕೆಂದು ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ . . .

ಅಧ್ಯಕ್ಷರು : ಪ್ರಶ್ನೆಯನ್ನು ಕೇಳಿ. ಸಂಬಂಧಪಟ್ಟ ಮಂತ್ರಿಗಳಿದ್ದಾರೆ, ಉತ್ತರ ನೀಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಲಿಖಿತವಾಗಿ ಕೊಟ್ಟಿರುವ ಉತ್ತರದಲ್ಲಿ ಎಲ್ಲವನ್ನೂ ಸ್ಪಷ್ಟವಾಗಿ ತಿಳಿಸಿದ್ದೇವೆ. ರಾಯಚೂರಿನಲ್ಲಿ ಪಶು ಆಸ್ಪತ್ರೆಗಳ ಅವಶ್ಯಕತೆ ಇದೆ ಎಂಬುದನ್ನು ಸರ್ಕಾರ ಒಪ್ಪಿದೆ. ಇರಬೇಕಾದದ್ದು 144 ರಲ್ಲಿ 105 ಆಸ್ಪತ್ರೆಗಳಿವೆ. 39 ಆಸ್ಪತ್ರೆಗಳ ಕೊರತೆ ಇದೆ. ಅದನ್ನು ಈ ಬಾರಿ ತುಂಬಿಸಿಕೊಡುವ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಪ್ರತಾಪಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಜೆಟ್ ನಲ್ಲಿ ಹೊಸ ಆಸ್ಪತ್ರೆಗಳನ್ನು ಕೊಡುವುದಾಗಿ ಸರ್ಕಾರ ಘೋಷಣೆ ಮಾಡಿದ್ದು, ನಮ್ಮ ಭಾಗದಲ್ಲಿ ಹೆಚ್ಚಿನ ಅವಶ್ಯಕತೆ ಇರುವುದರಿಂದ ಆದ್ಯತೆ ಮೇರೆಗೆ ನಮ್ಮ ಭಾಗಕ್ಕೆ ಪಶು ಆಸ್ಪತ್ರೆಗಳನ್ನು ನೀಡಬೇಕೆಂದು ಕೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಸದಸ್ಯರ ಸಲಹೆಯನ್ನು ಒಪ್ಪಿದ್ದೇನೆ. ಈ ಬಾರಿ ಪಶು ಆಸ್ಪತ್ರೆಗಳನ್ನು ಮಂಜೂರು ಮಾಡಿ ಕೊಡುತ್ತೇನೆ.

ಅಧ್ಯಕ್ಷರು : ಆಯಿತು. ಈಗ ಶ್ರೀಮತಿ ಶಶಿಕಲಾ ಎ.ಜೊಲ್ಲೆ ರವರ ಪ್ರಶ್ನೆ.

ಪೊಲೀಸ್ ಸಿಬ್ಬಂದಿಯ ಕೊರತೆ

102(1665); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ರಾಜ್ಯದ ಗಡಿಭಾಗದಲ್ಲಿರುವ ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ಮತಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಪೊಲೀಸ್ ಠಾಣೆಗಳು ಎಷ್ಟು; ಕೊರತೆಗನುಗುಣವಾಗಿ ಹುದ್ದೆಗಳ ಭರ್ತಿಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು (ವಿವರ ನೀಡುವುದು);

ಆ) ಈ ಕ್ಷೇತ್ರದ ಠಾಣೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳಿಗೆ ಅಗತ್ಯ ವಸತಿಗೃಹಗಳು ಇಲ್ಲದೆ ತೊಂದರೆ ಅನುಭವಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಇ) ವಸತಿ ಗೃಹಗಳ ನಿರ್ಮಾಣದ ಬಗ್ಗೆ ಅಗತ್ಯ ಪ್ರಸ್ತಾವನೆ ಸಲ್ಲಿಕೆಯಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಮೊತ್ತದ ಪ್ರಸ್ತಾವನೆ ಯಾವಾಗ ಸಲ್ಲಿಸಲಾಗಿದೆ; ಇದುವರೆಗೂ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣವೇನು; ಯಾವ ಯಾವ ಠಾಣೆಗಳಿಗೆ ಎಷ್ಟು ವಸತಿ ಗೃಹಗಳನ್ನು ನಿರ್ಮಿಸಲಾಗುವುದು (ಸಂಪೂರ್ಣ ವಿವರ ನೀಡುವುದು)